ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,

ಹೊನ್ನಾಳಿ

**ಸಿ.ಸಿ. ನಂ.545/2022**

ಪಿರ್ಯಾದುದಾರರು : ಶ್ರೀ.ಜಿ ರೇಣುಕಪ್ಪ ಬಿನ್ ಗೌಡರ ಗಿರಿಮಲ್ಲಪ್ಪ
70 ವರ್ಷ, ವಾಸಃ ಚೀಲೂರು ಗ್ರಾಮ,
ನ್ಯಾಮತಿ ತಾಲ್ಲೂಕು.

ವಿರುದ್ಧ

ಆರೋಪಿ : ಪರಶುರಾಮ ಬಿನ್ ನಾಗಪ್ಪ, 53 ವರ್ಷ
ವಾಸಃ ಡಿಸಿಸಿ ಬ್ಯಾಂಕ್ ಮ್ಯಾನೇಜರ್,
ಚೀಲೂರು ಶಾಖೆ,
ನ್ಯಾಮತಿ ತಾಲ್ಲೂಕು.

ಭಾ. ದಂ. ಪ್ರ. ಸಂ. ಕಲಂ. 313 ರನ್ವಯ ಆರೋಪಿಯ ಹೇಳಿಕೆ

ಪ್ರಶ್ನೆಃ 1 ಃ ನ್ಯಾಯಾಲಯದ ಮುಂದೆ ದೂರಿನೊಂದಿಗೆ ಫಿರ್ಯಾದುದಾರರು ತಮ್ಮ ಪ್ರಮಾಣಪತ್ರದಲ್ಲಿ ತಿಳಿಸಿರುವ ವಿಚಾರವನ್ನು ತಿಳಿದುಕೊಂಡಿದ್ದೀರಾ?

ಉತ್ತರ ಃ

ಪ್ರಶ್ನೆಃ 2ಃ ಚಾಸಾ-1 ಜಿ ರೇಣುಕಪ್ಪ ಇವರು ತಮ್ಮ ಪ್ರಮಾಣಪತ್ರದಲ್ಲಿ ಆರೋಪಿಯಾದ ನೀವು ದಿಃ 24.11.2021 ರಂದು ತನ್ನ ಬಳಿ ರೂ. 6,50,000/- ಹಣವನ್ನು ಕೈಗಡ ರೂಪದಲ್ಲಿ ಕೊಡವಂತೆ ಕೇಳಿದ್ದರಿಂದ ಮತ್ತು ಸದರಿ ಹಣವನ್ನು ಬಹುಬೇಗನೇ ಹಿಂತಿರುಗಿಸುವುದಾಗಿ ಕೇಳಿಕೊಂಡಿದ್ದರಿಂದ ರೂ.6,50,000/- ಹಣವನ್ನು ಆರೋಪಿಯಾದ ನಿಮಗೆ ನೀಡಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು

ಹೇಳಲು ಇಚ್ಚಿಸುತ್ತೀರಿ ?

ಉತ್ತರ ಃ

ಪ್ರಶ್ನೆ 3 ಃ ಚಾಸಾ.1 ರವರು ಮುಂದುವರೆದು ತಮ್ಮ ಪ್ರಮಾಣಪತ್ರದಲ್ಲಿ ನೀವು ತೆಗೆದುಕೊಂಡಿರುವ ಸಾಲದ ಹಣಕ್ಕೆ ನೀವು ತನಗೆ ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತ, ಚೀಲೂರು ಶಾಖೆಗೆ ಸೇರಿದ ಚೆಕ್ ನಂ.006674 ನೇ ಚೆಕ್‌ನ್ನು ಕೊಟ್ಟು ಸದರಿ ಚೆಕ್‌ನ್ನು ದಿಃ 01.12.2021 ರಂದು ಕೆನರಾ ಬ್ಯಾಂಕ್, ಚೀಲೂರು ಶಾಖೆಗೆ ನಗದೀಕರಣಕ್ಕಾಗಿ ಸಲ್ಲಿಸಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಚಿಸುತ್ತೀರಿ ?

ಉತ್ತರ ಃ

ಪ್ರಶ್ನೆ 4 ಃ ಚಾಸಾ.1 ರವರು ಮುಂದುವರೆದು ತಮ್ಮ ಪ್ರಮಾಣಪತ್ರದಲ್ಲಿ ನಂತರ ಸದರಿ ಚೆಕ್ ಪುರಸ್ಕರಿಸುವಷ್ಟು ಹಣವಿಲ್ಲ ಎಂಬ ಕಾರಣದಿಂದ ಅಮಾನ್ಯಗೊಂಡಿರುತ್ತದೆ ಎಂದು ಮೆಮೋ ಮೂಲಕ ವಾಪಸ್ ಬಂದಿದ್ದರಿಂದ ತಾನು ನಿಮಗೆ ದಿಃ 13.12.2021 ರಂದು ವಕೀಲರ ಮೂಲಕ ನೋಟಿಸನ್ನು ನೋಂದಾಯಿತ ಅಂಚೆಯ ಮೂಲಕ ಕಳುಹಿಸಿ ಹಣವನ್ನು ಮರುಪಾವತಿಸುವಂತೆ ತಿಳಿಸಿದ್ದರೂ ನೀವು ಸಾಲದ ಹಣವನ್ನು ಮರುಪಾವತಿಸಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಚಿಸುತ್ತೀರಿ ?

ಉತ್ತರ ಃ

ಪ್ರಶ್ನೆ 5 :    ನೀವು ಹೇಳುವುದು ಏನಾದರೂ ಇದೆಯೇ ?

ಉತ್ತರ ಃ

ಪ್ರಶ್ನೆ 6:     ನಿಮ್ಮ ಪರ ಯಾರಾದರೂ ಸಾಕ್ಷಿದಾರರನ್ನು ವಿಚಾರಣೆ ಮಾಡಿಕೊಳ್ಳುವಿರಾ ?

ಉತ್ತರ ಃ

(ಆರೋಪಿಯ ಹೇಳಿಕೆಯನ್ನು ಆತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತು ಎಂದು ದೃಢೀಕರಿಸುತ್ತೇನೆ .)

ಸ್ಥಳ:ಹೊನ್ನಾಳಿ
ದಿನಾಂಕ : 25.01.2025.

(ದೇವದಾಸ್ ಹೆಚ್.)
ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹೊನ್ನಾಳಿ.